RNU AIR DHARWAD

SEPTEMBER 26, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಧಾರವಾಡ ಜಿಲ್ಲೆಯ,** ಬುಡಕಟ್ಟು ಸಮುದಾಯದ ಕುಟುಂಬಗಳು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮೂಲಕ, ಉದ್ಯೋಗಾವಕಾಶ ಪಡೆದುಕೊಂಡಿವೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಜಿಲ್ಲೆಯ ಅಳ್ನಾವರ ಮತ್ತು ಕಲಘಟಗಿ ತಾಲೂಕುಗಳ, ಸಿದ್ದಿ, ಹರಿಣಶಿಕಾರಿ ಮತ್ತು ಗೌಳಿ ಸಮುದಾಯಗಳ, 265ಕ್ಕೂ ಅಧಿಕ ಬುಡಕಟ್ಟು ಜನರ ಬಳಿ, ಸೂಕ್ತ ದಾಖಲೆಗಳಿಲ್ಲದಿದ್ದರೂ, ನರೇಗಾ ಜಾಬ್‌ಕಾರ್ಡ್ ನೀಡಲಾಗಿದೆ. ಇದು ಅವರ ಬದುಕಿನ ಗತಿ ಬದಲಿಸಿದೆ. ನರೇಗಾದಿಂದ ಬುಡಕಟ್ಟು ಸಮುದಾಯದವರಿಗೆ, ಸ್ವಾವಲಂಬಿ ಬದುಕು ಸಿಕ್ಕಿದೆ ಎಂದು, ಸಾಮಾಜಿಕ ಮಾಧ್ಯಮ ಫೇಸ್‌ಬುಕ್ ನಲ್ಲಿ, ಸಚಿವರು ಪ್ರಕಟಿಸಿದ್ದಾರೆ. ಅರಣ್ಯದ ಕಿರು ಉತ್ಪನ್ನಗಳನ್ನು ಮಾರಿ, ಜೀವನ ನಡೆಸುವ ಸಮುದಾಯಗಳ ಹಾಡಿಗೆ, ಅಧಿಕಾರಿಗಳು ಭೇಟಿ ನೀಡಿ, ಜಾಬ್ ಕಾರ್ಡ್ ವಿತರಿಸುತ್ತಿದ್ದಾರೆ.

<><><>

**ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ** ಹಾಗೂ ಸಂಶೋಧನಾ ಸಂಸ್ಥೆಯನ್ನು, 150 ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು, 450 ಕೋಟಿ ರೂಪಾಯಿ ಮೊತ್ತದ ಅಂದಾಜು ಕಾಮಗಾರಿಗೆ, ಸಚಿವ ಸಂಪುಟ ಆಡಳಿತಾತ್ಮಕ ಒಪ್ಪಿಗೆ ಸೂಚಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಬೆಳಗಾವಿ ಜಿಲ್ಲೆ, ಚಿಕ್ಕೋಡಿಗೆ ಮಂಜೂರಾಗಿದ್ದ, 50 ಹಾಸಿಗೆಗಳ ತೀವ್ರ ನಿಗಾ ಆರೈಕೆ ಘಟಕವನ್ನು, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕು ಆಸ್ಪತ್ರೆಗೆ ಸ್ಥಳಾಂತರಿಸಿ, 23 ಕೋಟಿ 75 ಲಕ್ಷ ರೂಪಾಯಿ ವೆಚ್ಚದಲ್ಲಿ, ನಿರ್ಮಿಸಲು ಸಂಪುಟ ಒಪ್ಪಿದೆ. ಕೊಡಗು ಜಿಲ್ಲೆ, ವಿರಾಜಪೇಟೆಯ 60 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನು, 250 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ, 95 ಕೋಟಿ 60 ಲಕ್ಷ ರೂಪಾಯಿ ವೆಚ್ಚದಲ್ಲಿ, ಮೇಲ್ದರ್ಜೆಗೇರಿಸಲು, ಸಂಪುಟ ಅನುಮೋದಿಸಿದೆ. ಕರ್ನಾಟಕ ರಾಜ್ಯ ಕೌಶಲ ಅಭಿವೃದ್ಧಿ ನೀತಿ 2025–2032ಕ್ಕೆ ಸಂಪುಟ ಅನುಮೋದನೆ ನೀಡಿದೆ.

<><><>

**ಕೇಂದ್ರ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಯೋಗದಲ್ಲಿ,** ಇಂದಿನಿಂದ ಮೂರು ದಿನಗಳ ಕಾಲ, 13ನೇ ರಾಷ್ಟ್ರೀಯ, **'ಪೆನ್ಕಾಕ್ ಸಿಲಟ್',** ಸಮರ ಕಲೆ ಸ್ಪರ್ಧೆಗಳು, ನಾಲ್ಕು ವಿಭಾಗಗಳಲ್ಲಿ ನಡೆಯಲಿವೆ ಎಂದು, ಕೊಪ್ಪಳ ಸಂಸದ ಹಾಗೂ ರಾಜ್ಯ ಪೆನ್ಕಾಕ್ ಸಿಲಟ್ ಕಾರ್ಯಾಧ್ಯಕ್ಷ ಕೆ.ರಾಜಶೇಖರ ಹಿಟ್ನಾಳ, ತಿಳಿಸಿದ್ದಾರೆ. ಪ್ರಥಮ ಬಾರಿಗೆ, ಕೊಪ್ಪಳದಲ್ಲಿ ಆಯೋಜಿತ, ಒಲಿಂಪಿಕ್ಸ್ ಅಸೋಸಿಯೇಷನ್ ಮಾನ್ಯತೆ ಹೊಂದಿರುವ, ಕ್ರೀಡಾಕೂಟಕ್ಕೆ, ಗವಿಮಠದ ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ, ಊಟ ಹಾಗೂ ವಸತಿಗೆ, ವ್ಯವಸ್ಥೆ ಮಾಡಿದ್ದಾರೆ ಎಂದು, ಸಂಸದ ಹಿಟ್ನಾಳ ಸ್ಮರಿಸಿದರು. ಮೂರು ದಿನಗಳ ಕಾಲ ಆಯೋಜಿತ ರಾಷ್ಟ್ರೀಯ ಪೆನ್ಕಾಕ್ ಸಿಲಟ್ ಕ್ರೀಡಾಕೂಟದ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಜ್ಯ ಪೆನ್ಕಾಕ್ ಸಿಲಟ್ ಅಸೋಸಿಯೇಶನ್ ಜಂಟಿ ಕಾರ್ಯದರ್ಶಿ, ಮಂಜುನಾಥ ಜಿ.ಗೊಂಡಬಾಳ

<><><>

**ಹಿರಿಯ ಸಾಹಿತಿ, ಎಸ್.ಎಲ್ ಭೈರಪ್ಪ** ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಇನ್ನು ಕೆಲವೇ ಕ್ಷಣಗಳಲ್ಲಿ ನೆರವೇರಲಿದೆ. ಇಂದು ಬೆಳಗ್ಗೆ ನಿಂದ, ಮೈಸೂರಿನ ಕುವೆಂಪು ನಗರದ ಅವರ ನಿವಾಸದಲ್ಲಿ, ಪಾರ್ಥೀವ ಶರೀರದ ಸಾರ್ವಜನಿಕ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಸಾವಿರಾರು ಸಂಖ್ಯೆಯ ಅಭಿಮಾನಿಗಳು, ಹಿತೈಷಿಗಳು ಅಂತಿಮ ನಮನ ಸಲ್ಲಿಸಿದರು.

<><><>

**ನೆರೆಯ, ಮಹಾರಾಷ್ಟ್ರ ರಾಜ್ಯದ,** ವೀರ್, ಉಜನಿ, ಸಿನಾ ಜಲಾಶಯ ಹಾಗೂ ಬೋರಿ ನದಿಯಿಂದ, ಒಟ್ಟಾರೆ ಎರಡೂವರೆ ಲಕ್ಷ ಕ್ಯೂಸೆಕ್ ನೀರು ಹರಿಬಿಡಲಾಗಿದೆ. ನಿನ್ನೆ ಸಂಜೆ ಹೊತ್ತಿಗೆ, ಕಲಬುರಗಿ ಜಿಲ್ಲೆಯ, ಅಫಜಲಪೂರ ತಾಲೂಕಿನ, ಸೊನ್ನ ಬ್ಯಾರೇಜಿಗೆ ನೀರು ತಲುಪಿದ್ದು, ಭೀಮಾ ನದಿಯ ಹರಿವಿನಲ್ಲಿ, ಹೆಚ್ಚಳವಾಗುವ ಸಂಭವವಿದೆ. ನದಿ ದಂಡೆಯ ಗ್ರಾಮಸ್ಥರು, ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ.

<><><>

**ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಇಂದು** ಮತ್ತು ನಾಳೆ, ವ್ಯಾಪಕವಾಗಿ ಸಾಧಾರಣದಿಂದ, ಭಾರಿ ಮಳೆ; ಇನ್ನುಳಿದ ದಿನಗಳಲ್ಲಿ, ಚದುರಿದಂತೆ ವ್ಯಾಪಕವಾಗಿ, ಸಾಧಾರಣ ಮಳೆಯಾಗಲಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ಇಂದು ಮತ್ತು ನಾಳೆ, ವ್ಯಾಪಕವಾಗಿ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ.

<><><>

**ಸ್ವಚ್ಛತೆಯೇ ಸೇವೆ ಪಾಕ್ಷಿಕದ ಹಿನ್ನೆಲೆ, ಗದಗ ನಗರದ ಚನ್ನಮ್ಮ** ವೃತ್ತದಿಂದ, ಶ್ರೀ ಮಹರ್ಷಿ ವಾಲ್ಮೀಕಿ ವೃತ್ತದವರೆಗೆ ಆಯೋಜಿತ, 'ಸ್ವಚ್ಛತಾ ಹಿ ಸೇವಾ'– ಸಾಮೂಹಿಕ ಸ್ವಚ್ಛತಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಸಿ.ಎನ್ ಶ್ರೀಧರ ಚಾಲನೆ ನೀಡಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>